ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಆಗಸ್ಟ್ 9, 2015

## ಕನ್ನಡ ಸಾರಸ್ವತ ಲೋಕದ ದಿಗ್ಗಜ
## ಡಾ ಕಯ್ಯಾರ ಕಿಞ್ಞಣ್ಣ ರೈ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಆಗಸ್ಟ್ 9:**

ಕನ್ನಡ ಸಾರಸ್ವತ ಲೋಕದ ದಿಗ್ಗಜ ಶತಾಯುಷಿ ಡಾ ಕಯ್ಯಾರ ಕಿಞ್ಞಣ್ಣ ರೈ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಆಡು ಮುಟ್ಟದ ಸೊಪ್ಪಿಲ್ಲ. ಡಾ ಕಯ್ಯಾರ ಕಿಞ್ಞಣ್ಣ ರೈ ಅವರು ಸೇವೆ ಸಲ್ಲಿಸದ ಕ್ಷೇತ್ರವೇ ಇಲ್ಲ ಶಾಲಾ ಶಿಕ್ಷಕನಾಗಿ, ಸ್ವಾತಂತ್ರ್ಯ ಹೋರಾಟಗಾರನಾಗಿ, ಪತ್ರಕರ್ತನಾಗಿ, ಭಾಷಾಂತರಕಾರನಾಗಿ, ಸಾಹಿತಿಯಾಗಿ ಹಾಗೂ ಕವಿಯಾಗಿ ಎಲ್ಲರ ಮನೆ–ಮನ ಗೆದ್ದ ಡಾ ಕಯ್ಯಾರ ಕಿಞ್ಞಣ್ಣ ರೈ ಅವರದು ಬಹುಮುಖ ಪ್ರತಿಭೆ. ಜನ ಸೇವೆ ಮಾಡಲು ಚುನಾವಣಾ ಅಖಾಡಕ್ಕೂ ಧುಮುಕಿದ್ದ ಡಾ ಕಯ್ಯಾರ ಕಿಞ್ಞಣ್ಣ ರೈ ಅವರು ಕರ್ನಾಟಕ ಏಕೀಕರಣಕ್ಕಾಗಿ ಅವಿರತ ಶ್ರಮಿಸಿ ಮುಂಚೂಣಿಯಲ್ಲಿದ್ದವರು.

ಮಹಾಜನ್ ವರದಿಯ ಸಂಪೂರ್ಣ ಅನುಷ್ಠಾನವಾಗಬೇಕು. ಕಾಸರಗೋಡು ಒಳಗೊಂಡಂತೆ ಕೇರಳದ ಚಂದ್ರಗಿರಿ ನದಿಯ ಕಾಸರಗೋಡು ಜಿಲ್ಲೆಯ ಉತ್ತರ ಭಾಗವೂ ಕರ್ನಾಟಕಕ್ಕೆ ಸೇರ್ಪಡೆಯಾಗಬೇಕು ಎಂಬ ಕೂಗಿಗೆ ಕೊರಳಾಗಿದ್ದ ಡಾ ಕಯ್ಯಾರ ಕಿಞ್ಞಣ್ಣ ರೈ ಅವರು ಕಳೆದ ಜೂನ್ 8 ರಂದು ತಮ್ಮ ಹುಟ್ಟು ಹಬ್ಬದ ಶತಮಾನ ಸಂಭ್ರಮವನ್ನು ಆಚರಿಸಿಕೊಳ್ಳುವಾಗಲೂ ಇದೇ ನಿಲುವಿಗೆ ಬದ್ಧರಾಗಿದ್ದರು. ತಮ್ಮ ಚಳುವಳಿಯು ಕೇರಳದ ವಿರುದ್ಧವೂ ಅಲ್ಲ. ಮಲೆಯಾಳಿಗಳ ವಿರುದ್ಧವೂ ಅಲ್ಲ. ಆದರೆ, ಕನ್ನಡ ಪರ ಎಂಬ ಅವರ ಮಾತಿಗೆ ಎಲ್ಲರೂ ಶರಣಾಗುತ್ತಿದ್ದರು.

ಕನ್ನಡ, ತುಳು, ಮಲೆಯಾಳಂ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಅತ್ಯಂತ ಅಧಿಕಾರವತ್ತಾಗಿ ಬರೆಯುವ ಸಾಮರ್ಥ್ಯ ಹೊಂದಿದ್ದ ಡಾ ಕಯ್ಯಾರ ಕಿಞ್ಞಣ್ಣ ರೈ ಅವರ ನಿಧನ ಭಾಷಾ ಲೋಕಕ್ಕೇ ಅಪಾರ ನಷ್ಟವನ್ನು ಉಂಟು ಮಾಡಿದೆ. ಡಾ ಕಯ್ಯಾರ ಕಿಞ್ಞಣ್ಣ ರೈ ಅವರ ಕನ್ನಡಾಭಿಮಾನವನ್ನು ಕನ್ನಡಿಗರು ನೂರ್ಕಾಲ ಸ್ಮರಿಸುತ್ತಾರೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**********

| ಡಿ ಪಿ ಎಂ |
| --- |